# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ | 849 |
| ಸದಸ್ಯರ ಹೆಸರು | ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | 23/07/2024 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಜೇನು ಕೃಷಿಯಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆ ಎಷ್ಟು; ಹಾಗೂ ಉತ್ಪಾದನೆಯಾಗುತ್ತಿರುವ ಜೇನು ತುಪ್ಪದ ಪ್ರಮಾಣವೆಷ್ಟು; | ರಾಜ್ಯದಲ್ಲಿ ಜೇನು ಕೃಷಿಯಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆ ಅಂದಾಜು 40,000 ಹಾಗೂ ಉತ್ಪಾದನೆಯಾಗುತ್ತಿರುವ ಜೇನು ತುಪ್ಪದ ಪ್ರಮಾಣ ಅಂದಾಜು 800 ಟನ್‌ಗಳಷ್ಟಿರುತ್ತದೆ. (ವಾರ್ಷಿಕ)<br>The number of persons engaged in beekeeping in the state is approximately 40,000: and the production of honey is approximately 800 tonnes. |
| ಆ) | ಜೇನು ಕೃಷಿಗೆ ಉತ್ತೇಜನ ನೀಡಲು ಸರ್ಕಾರ ಜೇನು ಕೃಷಿಯಲ್ಲಿ ಹೆಚ್ಚಿನ ಜ್ಞಾನವಿರುವ ಬುಡಕಟ್ಟು ಜನರಿಗೆ ವಿಶೇಷ ಒತ್ತು ನೀಡುತ್ತಿದೆಯೇ; | ಹೌದು. ರಾಜ್ಯ ಮತ್ತು ಜಿಲ್ಲಾ ವಲಯ ಜೇನು ಸಾಕಣೆ ಅಭಿವೃದ್ಧಿ ಯೋಜನೆಗಳಡಿ ಜೇನು ಪೆಟ್ಟಿಗೆ, ಕುಟುಂಬ ಹಾಗೂ ಸ್ಟ್ಯಾಂಡ್ ಖರೀದಿಗೆ (ಸಾಮಾನ್ಯ ರೈತರಿಗೆ -75% ರೂ.3375/- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ರೈತರಿಗೆ -90%, ರೂ.4050/-), ಮಧುವನ ಸ್ಥಾಪನೆ, ಜೇನು ತೆಗೆಯುವ ಯಂತ್ರ ಖರೀದಿಗೆ ಸಹಾಯಧನ ನೀಡಲು ಹಾಗೂ 2 ದಿನಗಳ ಅವಧಿಯ ಜೇನು ಕೃಷಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಡಿ ಜೇನು ಕೃಷಿಯಲ್ಲಿ ಹೆಚ್ಚಿನ ಜ್ಞಾನವಿರುವ ಬುಡಕಟ್ಟು ಜನರಿಗೆ ಜೇನು ಕೃಷಿಯಲ್ಲಿ ವಿಶೇಷ ಒತ್ತು ನೀಡಲಾಗಿದೆ. ಇಲಾಖೆಯ ಭಾಗಮಂಡಲ ಮತ್ತು ಬೀಳಗಿ ಜೇನು ಕೃಷಿ ತರಬೇತಿ ಕೇಂದ್ರಗಳಲ್ಲಿ ಆಯೋಜಿಸುತ್ತಿರುವ 3 ತಿಂಗಳ ಅವಧಿಯ ಅರ್ಹತಾ ಪತ್ರ ನೀಡಲಾಗುವ ಜೇನು ಕೃಷಿ ತರಬೇತಿಯನ್ನು ಬುಡಕಟ್ಟು ಜನಾಂಗದ ರೈತ ಮಕ್ಕಳು ಪಡೆದು ಕೊಳ್ಳಲು ಅವಕಾಶವಿರುತ್ತದೆ. ಇಲಾಖೆಯು ಬುಡಕಟ್ಟು ಜನರಿಗೆ ಯಾವುದೇ ಪ್ರತ್ಯೇಕ ಯೋಜನೆ ರೂಪಿಸಿರುವುದಿಲ್ಲ.<br>Yes. Under state and district sectors Development of Madhuvana and Apiculture schemes, subsidy for supply of bee box, colony and stand (for general farmers - 75% i.e., Rs.3375/- and Schedule Caste/Schedule Tribe farmers -90% i.e., Rs.4050/-), Establishment of Madhuvana, purchase of Honey extractors and 2 |

| | | |
|---|---|---|
| | | days bee keeping training programme is provided. Under this scheme emphasis has been given to tribal people who have more knowledge in beekeeping. The tribal farmers will also have an opportunity to get 3-months certificate training on beekeeping organized at Bhagamandala and Bilagi beekeeping training centers of the Department of Horticulture. The Department of Horticulture does not have separate scheme for the tribal people. |
| ಇ) | ಜೇನು ಕೃಷಿಗೆ ಉತ್ತೇಜನ ನೀಡಲು ಸರ್ಕಾರ ರೂಪಿಸಿರುವ ಕಾರ್ಯಕ್ರಮ ಮತ್ತು ಯೋಜನೆಗಳು: ಹಾಗೂ ವಿನಿಯೋಗಿಸುತ್ತಿರುವ ಅನುದಾನ ಎಷ್ಟು ವಿವರಿಸಿ? (ವಿವರ ನೀಡುವುದು) | ಜೇನು ಕೃಷಿಗೆ ಉತ್ತೇಜನ ನೀಡಲು ರಾಜ್ಯವಲಯದಡಿ "ಮಧುವನ ಮತ್ತು ಜೇನು ಸಾಕಣೆ ಅಭಿವೃದ್ಧಿ ಯೋಜನೆ" ಹಾಗೂ ಜಿಲ್ಲಾವಲಯದಡಿ "ಜೇನು ಸಾಕಾಣಿಕೆ ಯೋಜನೆ" ಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಾರ್ಯಕ್ರಮದ ವಿವರಗಳು ಈ ಕೆಳಕಂಡಂತಿದೆ.<br>1. **ಜೇನು ಕೃಷಿ ತರಬೇತಿ ಕಾರ್ಯಕ್ರಮ:**ರೈತರಿಗೆ ಹಾಗೂ ಜೇನು ಕೃಷಿ ಆಸಕ್ತರಿಗೆ ಎರಡು ದಿನಗಳ ಅವಧಿಯಲ್ಲಿ ವೈಜ್ಞಾನಿಕ ಜೇನು ಸಾಕಾಣಿಕೆ ಪದ್ಧತಿಗಳನ್ನೊಳಗೊಂಡಂತೆ ಜೇನು ಹುಳು ಪ್ರಬೇಧಗಳು, ವಿವಿಧ ಋತುಮಾನಗಳಲ್ಲಿ ಜೇನು ಕುಟುಂಬ ನಿರ್ವಹಣೆ, ಕೀಟ ರೋಗ ನಿರ್ವಹಣೆ, ಜೇನ ಕೊಯ್ಲು ಕುರಿತಂತೆ ತರಬೇತಿ ನೀಡಲಾಗುವುದು. ಪ್ರತಿ ಫಲಾನುಭವಿಗೆ ಪ್ರತಿ ದಿನಕ್ಕೆ ರೂ.400/- ರಂತೆ ಒಟ್ಟು ರೂ.800/- ಗಳನ್ನು ವೆಚ್ಚ ಭರಿಸುವುದು.<br>2. **ಜೇನು ಪೆಟ್ಟಿಗೆ, ಕುಟುಂಬ ಹಾಗೂ ಸ್ಟ್ಯಾಂಡ್ ಖರೀದಿಗೆ ಸಹಾಯಧನ:**<br>ಫಲಾನುಭವಿಗಳಿಗೆ ಜೇನು ಸಾಕಾಣಿಕೆಗೆ ಪ್ರೋತ್ಸಾಹಿಸಲು ಜಮೀನು ಹೊಂದಿರುವ ಫಲಾನುಭವಿಗಳಿಗೆ 10 ಜೇನು ಪೆಟ್ಟಿಗೆ, ಕುಟುಂಬ ಹಾಗೂ ಸ್ಟ್ಯಾಂಡ್ ಗಳು ಮತ್ತು ಜಮೀನು ರಹಿತ ಫಲಾನುಭವಿಗಳಿಗೆ 4 ಜೇನು ಪೆಟ್ಟಿಗೆ, ಕುಟುಂಬ ಹಾಗೂ ಸ್ಟ್ಯಾಂಡ್ ಗಳಿಗೆ ಸಹಾಯಧನ ಪಡೆಯಬಹುದಾಗಿರುತ್ತದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ರೈತರಿಗೆ ಹಾಗೂ ಜೇನು ಕೃಷಿಕರಿಗೆ (ಶೇ.90) ರೂ.4050/-ಗಳ ಸಹಾಯಧನವನ್ನು ಮತ್ತು ಇತರರಿಗೆ (ಶೇ.75) ರೂ.3375/- ಗಳ ಸಹಾಯಧನವನ್ನು ನೀಡಲಾಗುವುದು.<br>**3. ಮಧುವನ ಸ್ಥಾಪನೆಗೆ ಸಹಾಯಧನ:** ಜೇನುಕೃಷಿಯನ್ನು ಉದ್ದಿಮೆಯನ್ನಾಗಿ ಕೈಗೊಳ್ಳ ಬಯಸುವ ಜೇನು ಕೃಷಿಕರಿಗೆ ಅಗತ್ಯವಿರುವ ಸಲಕರಣೆಗಳಾದ- ಜೇನು ಪೆಟ್ಟಿಗೆ ಮತ್ತು ಜೇನು |

| | | |
|---|---|---|
| | | ಕುಟುಂಬ, ಜೇನು ಪೆಟ್ಟಿಗೆಗಳನ್ನು ಇಡಲು ಕಬ್ಬಿಣದ ಸ್ಟ್ಯಾಂಡ್, ಜೇನು ತೆಗೆಯುವ ಯಂತ್ರ, ಮುಖ ಪರದೆ, ಹೊಗೆತಿದಿ, ಕೃತಕ ಎರಿ ತಳಹದಿಯನ್ನು ಒಳಗೊಂಡಿರುವ ಘಟಕಕ್ಕೆ ತಗಲುವ ವೆಚ್ಚ ರೂ.51,000/- ಗಳಾಗಿದ್ದು ಎಲ್ಲಾ ವರ್ಗದ ರೈತರಿಗೆ ಶೇ.75 ರಂತೆ ಎಂದರೆ ರೂ.38,250/- ಗಳ ಸಹಾಯಧನ ನೀಡಲಾಗುತ್ತದೆ.<br>**4. ಜೇನು ತೆಗೆಯುವ ಯಂತ್ರ ಖರೀದಿಗೆ ಸಹಾಯಧನ** : ಜೇನು ತೆಗೆಯುವ ಕಾರ್ಯದಲ್ಲಿ ಶುಚಿತ್ವ ಮತ್ತು ಗುಣಮಟ್ಟವನ್ನು ವೃದ್ಧಿಸುವ ಉದ್ದೇಶದಿಂದ ಫಲಾನುಭವಿಗಳಿಗೆ ಜೇನು ತೆಗೆಯುವ ಯಂತ್ರ ಖರೀದಿ ಮಾಡಲು ಘಟಕ ವೆಚ್ಚ ರೂ.4,500/- ತಗಲುವುದು. ಅದರಲ್ಲಿ ಶೇ. 75 ರಷ್ಟು ಎಂದರೆ ರೂ.3375/- ಗಳಷ್ಟು ಸಹಾಯಧನ ನೀಡಲಾಗುತ್ತದೆ.<br>2024-25ನೇ ಸಾಲಿಗೆ ಜೇನು ಕೃಷಿಗೆ ಉತ್ತೇಜನ ನೀಡಲು ರೂ. 526.5 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ.<br>To promote beekeeping in the state, Programmes are being implemented under State Sector scheme - "Development of Madhuvana and Apiculture" and under District sector "Apiculture development scheme".<br>The following components are under implementation.<br><br>**1.Beekeeping Training Programme:** Farmers / interested beekeepers will be trained on Methods of Scientific Beekeeping including Species of honeybee, Bee colony management in different seasons, Pest Management, method of honey extraction /harvesting for a period of two days at a cost of Rs.400/- per day total of Rs.800/- per beneficiary.<br><br>**2.Subsidy for bee box, colony and stand:** To promote beekeeping, the beneficiaries who own the land can get 10 beeboxes, colony and stand and landless beneficiaries will get 4 beeboxes, colony and stand. A subsidy of Rs.4050/- (at 90%) will be given to Schedule Caste and Schedule Tribe farmers/beekeepers and to others at Rs.3375/-( at 75%.) |

| | | |
|---|---|---|
| | | **3.Subsidy for establishment of Madhuvana :** The equipments required for beekeepers who want to take up beekeeping as a business, such as - bee box and bee colony, iron stand for keeping bee boxes, honey extraction machine, face mask, fume hood, colony foundation sheet costs Rs.51,000/-unit and subsidy will be given at Rs.38,250/-(75%)for all categories of farmers.<br>**4.Subsidy for Honey extractor:** For the purpose of improving the cleanliness and quality of honey, the beneficiary will be provided honey extractor at a cost of Rs.4,500/- per unit. Out of which beneficiary will get Rs.3375/- as a subsidy at 75%.<br><br>During 2024-25 Rs. 526.5 Lakhs has been earmarked for promoting Apiculture. |

HORTI 317 HGM 2024

**(ಎಸ್.ಎಸ್.ಮಲ್ಲಿಕಾರ್ಜುನ್)**

ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು